ಕೇಂದ್ರ ಪ್ರಾಯೋಜಿತ ರಸ್ತೆ ನಿಧಿ

929 (1070) - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೇಂದ್ರ ಪ್ರಾಯೋಜಿತ ರಸ್ತೆ ನಿಧಿ (ಸೆಂಟ್ರಲ್ ರೋಡ್ ಫಂಡ್) ನಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ಪಡೆದುಕೊಂಡ ಮೊತ್ತವೆಷ್ಟು. ವರ್ಷವಾರು ಪಟ್ಟಿ ಒದಗಿಸುವುದು.

ಆ. ಈ ಯೋಜನೆಯಲ್ಲಿ ರಸ್ತೆಗಳ ಆಯ್ಕೆಯನ್ನು ಯಾವ ಆಧಾರದಲ್ಲಿ ಮಾಡಲಾಗುವುದು. ಈ ಯೋಜನೆಯಡಿಯಲ್ಲಿ ರಸ್ತೆಗಳ ಆಯ್ಕೆಯಲ್ಲಿ ಸ್ವಜನಪಕ್ಷಪಾತ ನಡೆದಿರುವುದು ನಿಜವೇ. ನಿಜವಾಗಿದ್ದಲ್ಲಿ, ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಮಂತ್ರಿಯವರು) :

ಅ. ಕೇಂದ್ರ ರಸ್ತೆ ನಿಧಿ (ಸೆಂಟ್ರಲ್ ರೋಡ್ ಫಂಡ್) ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ಪಡೆದುಕೊಂಡ ಅನುದಾನದ ವಿವರಗಳು ಈ ಕೆಳಕಂಡಂತಿವೆ.

1999-2000 - 240.00 ಲಕ್ಷಗಳು -

2000-2001 - 460.00 ಲಕ್ಷಗಳು

2001-2002 - 3145.00 ಲಕ್ಷಗಳು

ಆ. ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅನುದಾನದ (Accruals) ಲಭ್ಯತೆಗನುಗುಣವಾಗಿ ಅವಕಾಶವಿರುತ್ತದೆ. ಜನಪ್ರತಿನಿಧಿಗಳಿಂದ ಬಂದ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಲಭ್ಯತೆ ಮೇರೆಗೆ ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ ಸಂಬಂಧಿಸಿದಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟದಲ್ಲಿ ಮರ ಕಡಿದಿರುವ ಮಾಹಿತಿ

930 (1071) - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ರಬ್ಬರ್ ತೋಟದಲ್ಲಿ ಎಷ್ಟು ವಿಸ್ತೀರ್ಣದಲ್ಲಿ ರಬ್ಬರ್ ಮರಗಳನ್ನು ಕಡಿಯಲಾಗಿದೆ, ಹೊಸದಾಗಿ ಎಷ್ಟು ವಿಸ್ತೀರ್ಣದಲ್ಲಿ ಹೊಸ ತೋಟ ಮಾಡಲಾಗಿದೆ, ಕಡಿದ ರಬ್ಬರ್ ಮರಗಳ ಮಾರಾಟದಿಂದ ಬಂದ ಆದಾಯವೆಷ್ಟು?

ಆ. ಸುಳ್ಯ ಹಾಗೂ ಪುತ್ತೂರು ತಾಲ್ಲೂಕಿನಲ್ಲಿ ಪ್ರಸ್ತುತ ಸಿಗುವ ರಬ್ಬರ್ ಹಾಲು ಎಷ್ಟು, ಪ್ರತೀ ಲೀಟರಿಗೆ ತಗಲುವ ಉತ್ಪಾದನಾ ವೆಚ್ಚ ಎಷ್ಟು, ಕಳೆದ ಮೂರು ವರ್ಷಗಳಲ್ಲಿ ನಿಗಮಕ್ಕೆ ಬರುತ್ತಿರುವ ಆದಾಯವೆಷ್ಟು? (ವರ್ಷಾವಾರು ವಿವರ ನೀಡುವುದು)?

ಡ್ರೈ ರಬ್ಬರ್ ಕಂಟೆಂಟ್

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ರಬ್ಬರ್ ತೋಟದಲ್ಲಿ 1994-1995 ರಿಂದ 2001-02 ವರೆಗೆ ಒಟ್ಟು 936.6 ಹೆಕ್ಟೇರ್‌ಗಳಲ್ಲಿ ರಬ್ಬರ್ ಮರಗಳನ್ನು ಕಡಿಯಲಾಗಿದೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಯಮಿತದಲ್ಲಿ 1995-96 ರಿಂದ 2001-02 ವರೆಗೆ ಬರುವ 708.21 ಹೆಕ್ಟೇರ್ ಪ್ರದೇಶಗಳಲ್ಲಿ ಹೊಸ ರಬ್ಬರ್ ತೋಟ ಮಾಡಲಾಗಿದೆ.

1994-95 ರಿಂದ 2001-02 ವರೆಗೆ ಕಡಿದ ರಬ್ಬರ್ ಮರಗಳ ಮಾರಾಟದಿಂದ ಬಂದ ಒಟ್ಟು ಆದಾಯ ರೂ. 1379.41 ಲಕ್ಷ ರೂ. ಗಳು.

ಆ. ಕಳೆದ ಮೂರು ವರ್ಷಗಳ ಮತ್ತು ಪ್ರಸ್ತುತ ಸಿಗುತ್ತಿರುವ ರಬ್ಬರ್ ಉತ್ಪಾದನೆಯ ವಿವರಗಳನ್ನು ಈ ಕೆಳಗಿನಂತೆ ಡಿ.ಆರ್. ಸಿ. ಡ್ರೈ ರಬ್ಬರ್ ಕಂಟೆಂಟ್ ಕಿ.ಗ್ರಾಂ ನಲ್ಲಿ ನೀಡಲಾಗಿದೆ.

ಉತ್ಪಾದನೆ ಡಿ.ಆರ್.ಸಿ.ಕಿ. ಗ್ರಾಂ.ಗಳಲ್ಲಿ

ವರ್ಷ	ಪುತ್ತೂರು ವಿಭಾಗ	ಸುಳ್ಯ ವಿಭಾಗ	ಒಟ್ಟು ಉತ್ಪಾದನೆ
1999-00	12,24,446.20	19.53.582.90	31,78,020.10
2000-01	13,73,523.90	19,27,975.40	33,01,499.30
2001-02	12,50,952.00	15,75,818.10	28,26,270.59
2002-03			
ಏಪ್ರಿಲ್ 2002	91,064.20	1,17,399.30	2,08,463.59
ಮೇ 2002	90,693.50	1,21,608.60	2,12,303.10
ಜೂನ್ 2002	1,03,291.00	98,649.30	2,01,940.30

ರಬ್ಬರ್ ಉತ್ಪಾದನೆಯನ್ನು ಡಿ.ಆರ್.ಸಿ.ಕಿ.ಗ್ರಾಂ ನಲ್ಲಿ ಲೆಕ್ಕ ಹಾಕುತ್ತಿರುವುದರಿಂದ ಉತ್ಪಾದನಾ ವೆಚ್ಚವನ್ನು ಡಿ.ಆರ್.ಸಿ. ಕಿ.ಗ್ರಾಂ.ಗೆ. ಕಳೆದ ಮೂರು ವರ್ಷಗಳ ಅವಧಿಗೆ ನೀಡಲಾಗಿದೆ.

ವರ್ಷ	ಉತ್ಪಾದನೆ	ಒಟ್ಟು ವೆಚ್ಚ ಲಕ್ಷ ರೂ. ಗಳಲ್ಲಿ	ಪ್ರತಿ ಡಿ.ಆರ್.ಸಿ. ಕಿಲೋ ಗ್ರಾಂಗೆ ತಗಲುವ ಉತ್ಪಾದನೆ ವೆಚ್ಚ
1999-00	31,78,029.10	1333.25	41.95
2000-01	33,01,499.30	1375.06	41.65
2001-02	28,26,270.50	1168.85	41.36
ವರ್ಷ		ಒಟ್ಟು ಆದಾಯ ಲಕ್ಷಗಳಲ್ಲಿ	
1999-00		1109.06	
2000-01		1371.04	
2001-02		1268.27	

ಮೈಸೂರು-ಬಂಟ್ವಾಳ ರಾಜ್ಯ ಹೆದ್ದಾರಿ

931 (1073) - ಶ್ರೀ ಸದಾನಂದಗೌಡ.ಡಿ.ವಿ. (ಪುತ್ತೂರು): ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ. ಮೈಸೂರು-ಬಂಟ್ವಾಳ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವಂತೆ ಕೇಂದ್ರ ಸರ್ಕಾರವನ್ನು ಕೋರುವ ಇರಾದೆ ಸರ್ಕಾರಕ್ಕಿದೆಯೇ, ಇದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ಇಲ್ಲದಿದ್ದಲ್ಲಿ ಕಾರಣಗಳೇನು.